ಕರ್ನಾಟಕ ಸರ್ಕಾರ

ಅರಣ್ಯ ಇಲಾಖೆ

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಇವರ ಕಛೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003**

# ಅಧಿಸೂಚನೆ

**ಅಧಿಸೂಚನೆ ಸಂಖ್ಯೆ: ಬಿ9-ನೇಮಕಾತಿ-ವಿವ-5/2019-20 ದಿನಾಂಕ: 30 -08-2019**

**ಅರಣ್ಯ ವ್ಯವಸ್ಥಾಪನಾಕಾರಿ (Forest Settlement Officer) ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ**

* * * * *

ಸರ್ಕಾರದ ಆದೇಶ ಸಂಖ್ಯೆ: ಅಪಜೀ 171 ಅಪಸೆ 2018, ಬೆಂಗಳೂರು ದಿನಾಂಕ: 31.07.2019 ರಂತೆ ಅರಣ್ಯ ಇಲಾಖೆಯಲ್ಲಿ **10 ಅರಣ್ಯ ವ್ಯವಸ್ಥಾಪನಾಧಿಕಾರಿ (Forest Settlement Officer) ಹುದ್ದೆಗಳಿಗೆ** ಗುತ್ತಿಗೆ ಆಧಾರದ ಮೇಲೆ ಈ ಅಧಿಸೂಚನೆಯೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿನ ಕರ್ತವ್ಯಗಳನ್ನು ನಿರ್ವಹಿಸಲು ನಿವೃತ್ತ ಕೆ.ಎ.ಎಸ್. ಅಧಿಕಾರಿಗಳ (ನಿವೃತ್ತ ಸಹಾಯಕ ಆಯುಕ್ತರು (ಕಂದಾಯ)) ಸೇವೆಯನ್ನು ತಾತ್ಕಾಲಿಕವಾಗಿ ಗರಿಷ್ಠ 2 ವರ್ಷಗಳ ಅವಧಿಗೆ ನೇಮಕ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. **ಅರ್ಜಿ ಸಲ್ಲಿಸುವ ವಿಧಾನ:**

   ಅರ್ಜಿ ಮತ್ತು ಅಧಿಸೂಚನೆಯನ್ನು ಇಲಾಖಾ ವೆಬ್‌ಸೈಟ್: www.aranya.gov.in ನಲ್ಲಿ ಪ್ರಕಟಪಡಿಸಲಾಗುವುದು. ಅರ್ಜಿಯನ್ನು ನೋಂದಾಯಿತ ಅಂಚೆ ಮುಖಾಂತರ ಹಾಗೂ ಮುದ್ದಾಂ ಆಗಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಮುಖ್ಯಸ್ಥರು ಅರಣ್ಯ ಪಡೆ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು – 560 003 ರವರ ಕಛೇರಿಗೆ ದಿನಾಂಕ: 03.09.2019 ರಿಂದ 01.10.2019 ರಂದು ಅಪರಾಹ್ನ 4.30 ಗಂಟೆಯವರೆಗೆ ಸಲ್ಲಿಸಬಹುದಾಗಿರುತ್ತದೆ.

   ಅರ್ಜಿದಾರರು ಸಹಾಯಕ ಆಯುಕ್ತರು (ಕಂದಾಯ) ಈ ಹುದ್ದೆಯಲ್ಲಿ ಸೇವೆ ಸಲ್ಲಿದ ಕುರಿತು ಸೇವಾ ವಿವರಗಳ ಮಾಹಿತಿ ಹಾಗೂ ವಯೋಮಿತಿಯ ಕುರಿತು ಅಧಿಕೃತ ದಾಖಲೆಯನ್ನು ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸುವುದು.

2. **ವೇತನ:** ಗುತ್ತಿಗೆ ಆಧಾರದಲ್ಲಿ ನೇಮಕವಾದ ಅರಣ್ಯ ವ್ಯವಸ್ಥಾಪನಾಧಿಕಾರಿಗೆ ಮಾಸಿಕ ವೇತನ ರೂ. 50,000/- ಗಳನ್ನು ನಿಗಧಿಪಡಿಸಲಾಗಿದೆ ಹಾಗೂ ಸದರಿ ಹುದ್ದೆಗೆ ನೇಮಿಸಿಕೊಳ್ಳಲಾಗುವವರಿಗೆ ಒಂದು ವಾಹನವನ್ನು ಹೊರಗುತ್ತಿಗೆ ಆಧಾರ ಅಥವಾ ಬಾಡಿಗೆ ಆಧಾರದ ಮೇಲೆ ಒದಗಿಸಲಾಗುವುದು.

3. **ಹುದ್ದೆಗಳ ವಿವರ:**

| ಕ್ರ.ಸಂ. | ಕರ್ತವ್ಯ ನಿರ್ವಹಿಸುವ ಕೇಂದ್ರಸ್ಥಾನ | ಕಾರ್ಯ ವ್ಯಾಪ್ತಿ | ಹುದ್ದೆಗಳ ಸಂಖ್ಯೆ |
|---|---|---|---|
| 1 | ಸಾಗರ (ಶಿವಮೊಗ್ಗ ಜಿಲ್ಲೆ) | ಸಾಗರ | 1 |
| 2 | ಚಿಕ್ಕಮಗಳೂರು | ಚಿಕ್ಕಮಗಳೂರು | 1 |
| 3 | ಕಡೂರು (ಚಿಕ್ಕಮಗಳೂರು ಜಿಲ್ಲೆ) | ಕಡೂರು | 1 |
| 4 | ಮೈಸೂರು | ಮೈಸೂರು<br>ಚಾಮರಾಜನಗರ | 1 |
| 5 | ಮಂಡ್ಯ | ಮಂಡ್ಯ<br>ರಾಮನಗರ | 1 |
| 6 | ಕೋಲಾರ | ಕೋಲಾರ<br>ಚಿಕ್ಕಬಳ್ಳಾಪುರ | 1 |

| ಕ್ರ.ಸಂ. | ಕರ್ತವ್ಯ ನಿರ್ವಹಿಸುವ ಕೇಂದ್ರಸ್ಥಾನ | ಕಾರ್ಯ ವ್ಯಾಪ್ತಿ | ಹುದ್ದೆಗಳ ಸಂಖ್ಯೆ |
|---|---|---|---|
| 7 | ಹಾಸನ | ಹಾಸನ<br>ತುಮಕೂರು<br>ಮಧುಗಿರಿ<br>ಬೆಂಗಳೂರು ದಕ್ಷಿಣ<br>ಬೆಂಗಳೂರು ಗ್ರಾಮಾಂತರ | 1 |
| 8 | ರಾಯಚೂರು | ರಾಯಚೂರು<br>ಯಾದಗಿರಿ | 1 |
| 9 | ಕಲಬುರ್ಗಿ | ಕಲಬುರ್ಗಿ<br>ಬೀದರ್ | 1 |
| 10 | ಧಾರವಾಡ | ಧಾರವಾಡ<br>ಬೆಳಗಾವಿ<br>ವಿಜಯಪುರ<br>ಹಾವೇರಿ<br>ದಾವಣಗೆರೆ<br>ಚಿತ್ರದುರ್ಗ | 1 |
| | ಒಟ್ಟು | | 10 |

4. **ಅರ್ಹತೆ:**
ಅರ್ಜಿದಾರರು ಸಹಾಯಕ ಆಯುಕ್ತರು (ಕಂದಾಯ) ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿರಬೇಕು ಹಾಗೂ ಈ ಕೆಳಕಂಡ ವಿಷಯಗಳ ಕುರಿತು ಪರಿಣಿತರಾಗಿರಬೇಕು.

    1. ಅರಣ್ಯ ಮೋಜಣಿ ಹಾಗೂ ಗಡಿರೇಖೆ ಗುರುತಿಸುವಿಕೆ ಮತ್ತು ನಕಾಶೆ ತಯಾರಿಕೆ
    2. ಭೂ ವಿವಾದಗಳ ಕುರಿತಂತೆ ಸಿವಿಲ್ ನ್ಯಾಯಾಲಯದಂತೆ ಕರ್ತವ್ಯ ನಿರ್ವಹಿಸಬೇಕು
    3. Theodolite Survey ಮತ್ತು GPS Survey ಕುರಿತಂತೆ ಪರಿಣಿತರಾಗಿರಬೇಕು.

ಕರ್ತವ್ಯ ನಿರ್ವಹಿಸುವ ಕೇಂದ್ರಸ್ಥಾನದ ಜಿಲ್ಲಾ ವ್ಯಾಪ್ತಿಯ ಅರ್ಜಿದಾರರಿಗೆ ಮೊದಲ ಆಧ್ಯತೆಯನ್ನು ನೀಡಲಾಗುವುದು.

5. **ವಯೋಮಿತಿ:**
ಅರ್ಜಿಯನ್ನು ಆಹ್ವಾನಿಸಿ ಜಾರಿ ಮಾಡಲಾಗಿರುವ ಈ ಅಧಿಸೂಚನೆಯ ದಿನಾಂಕಕ್ಕೆ ಅರ್ಜಿದಾರರು 65 ವರ್ಷ ವಯಸ್ಸನ್ನು ಮೀರಿರಬಾರದು.

6. **ಆಯ್ಕೆ ವಿಧಾನ:** ಸಂದರ್ಶನ ಪರೀಕ್ಷೆ

ಅರಣ್ಯ ವ್ಯವಸ್ಥಾಪನಾಧಿಕಾರಿ (Forest Settlement Officer) ಹುದ್ದೆಗೆ ಆಸಕ್ತಿ ಉಳ್ಳವರು ನಿಗಧಿಪಡಿಸಲಾದ ದಿನಾಂಕದೊಳಗೆ ನೋಂದಾಯಿತ ಅಂಚೆ ಮೂಲಕ ಅಥವಾ ಮುದ್ದಾಂ ಮೂಲಕ ಅರ್ಜಿಯನ್ನು ಸಲ್ಲಿಸಲು ತಿಳಿಸಲಾಗಿದೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)

ಬೆಂಗಳೂರು,
ದಿನಾಂಕ:20 –08–2019

# ಅನುಬಂಧ

## ಅರಣ್ಯ ವ್ಯವಸ್ಥಾಪನಾಧಿಕಾರಿ (Forest Settlement Officer) ಹುದ್ದೆಯ ಕರ್ತವ್ಯದ ಸಂಕ್ಷಿಪ್ತ ವಿವರ

1. ಕರ್ನಾಟಕ ಅರಣ್ಯ ಕಾಯ್ದೆ ಕಲಂ – 4 ರಡಿ ಅಧಿಸೂಚಿಸಿರುವ ಪ್ರಕರಣಗಳಲ್ಲಿ ಅಧಿಸೂಚಿಸಿದ ಭೂ ಪ್ರದೇಶದ ಭೂ ಮಾಪನಾ ಮಾಡುವುದು, ಗಡಿರೇಖೆ ಗುರುತಿಸುವುದು ಮತ್ತು ಅದರ ಭೂಪಟವನ್ನು ತಯಾರಿಸುವ ಕುರಿತು ಕ್ರಮ ಕೈಗೊಳ್ಳುವುದು.

2. ದಾವೆಗಳ ಅಧಿವಿಚಾರಣೆಯಲ್ಲಿ ಸಿವಿಲ್ ನ್ಯಾಯಾಲಯದಂತೆ ವಿಚಾರಣೆ ನಡೆಸಿ, ಪ್ರಕರಣವನ್ನು ಇತ್ಯರ್ಥಗೊಳಿಸುವುದು.

3. ಸರ್ಕಾರವು ಸ್ವಾಧೀನತೆಯ ಹಕ್ಕನ್ನು ಕಲಂ – 3 ರಂತೆ ಹೊಂದಿರುವ ಪ್ರದೇಶಕ್ಕೆ ರಾಜ್ಯ ಸರ್ಕಾರವು ಕರ್ನಾಟಕ ಅರಣ್ಯ ಕಾಯ್ದೆ 1963 ರ ಕಲಂ – 4 ರಡಿ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಸದರಿ ಅಧಿಸೂಚನೆಯಲ್ಲಿ ಕಲಂ – 4(1)(ಸಿ) ರಂತೆ ಸದರಿ ಪ್ರದೇಶದ ಹಕ್ಕು ಬಾದ್ಯತೆಗಳನ್ನು ಅಥವಾ ಯಾವುದೇ ಖಾಸಗಿ ವ್ಯಕ್ತಿಯ ಹಕ್ಕನ್ನು, ಅರಣ್ಯ ಉತ್ಪನ್ನದ ಹಕ್ಕನ್ನು ಮತ್ತು ಮೀಸಲು ಅರಣ್ಯ ರಚನೆಯ ವಿಚಾರವಾಗಿ ಅರಣ್ಯ ಕಾಯ್ದೆ ಮತ್ತು ನಿಯಮಗಳಲ್ಲಿ ವಿವರಿಸಿರುವಂತೆ ಕಾನೂನಿನ್ವಯ ಕ್ರಮ ತೆಗೆದುಕೊಳ್ಳುವ ಬಗ್ಗೆ ಕಾರ್ಯ ನಿರ್ವಹಿಸುವುದು.

4. ಅರಣ್ಯ ವ್ಯವಸ್ಥಾಪನಾಧಿಕಾರಿಯವರು ಭೂ ಸ್ವಾಧೀನ ಕಾಯ್ದೆ ಹಾಗೂ ರಾಜ್ಯ ವಿವಿಧ ಭೂ ಸ್ವಾಧೀನ ಕಾಯ್ದೆಗಳಡಿಯಲ್ಲಿ (ಕರ್ನಾಟಕ ಅರಣ್ಯ ಕಾಯ್ದೆ 1963, ಕರ್ನಾಟಕ ಅರಣ್ಯ ನಿಯಮಗಳು 1969, ವನ್ಯಜೀವಿ ಸಂರಕ್ಷಣಾ ಕಾಯ್ದೆ 1972, ವನ್ಯಜೀವಿ ರಕ್ಷಣಾ ನಿಯಮಗಳು 1973, ಕರ್ನಾಟಕ ಅರಣ್ಯ ಕೈಪಿಡಿ 1980, ಅರಣ್ಯ ಸಂರಕ್ಷಣಾ ಕಾಯ್ದೆ 1980, ಅರಣ್ಯ (ಸಂರಕ್ಷಣಾ) ನಿಯಮಗಳು 1981) ಗಳಲ್ಲಿ ಪ್ರದತ್ತವಾದ ಶಾಸನಬದ್ಧ ಅಧಿಕಾರವನ್ನು ಚಲಾಯಿಸಲು ಅಧಿಕಾರ ಪ್ರತ್ಯಾಯೋಜಿಸಲಾಗಿದೆ.

5. ಪ್ರಸ್ತುತ ಈಗಾಗಲೇ ಸರ್ಕಾರವು ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ – 4 ರಡಿ ಅಧಿಸೂಚನೆ ಹೊರಡಿಸಿರುವ ಪ್ರದೇಶಗಳು ಕಳೆದ 2 – 3 ದಶಕಗಳಿಂದ ಅರಣ್ಯ ವ್ಯವಸ್ಥಾಪನಾ ಪ್ರಕ್ರಿಯೆಗೆ ಒಳಪಟ್ಟು, ಕಲಂ – 17 ರಡಿ ಅಂತಿಮವಾಗಿ ಅಧಿಸೂಚನೆಯಾಗದೆ ರಾಜ್ಯ ವ್ಯಾಪಿ ಬಾಕಿ ಉಳಿದಿರುವ ಪ್ರಕರಣಗಳನ್ನು ನಿಗಧಿತ ಕಾಲ ಮಿತಿಯೊಳಗೆ ಇತ್ಯರ್ಥಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವುದು ಹಾಗೂ ಇಲಾಖೆಯು ಈ ಬಗ್ಗೆ ಕಾಲ ಕಾಲಕ್ಕೆ ನಿಗಧಿಪಡಿಸುವ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

ಬೆಂಗಳೂರು,
ದಿನಾಂಕ: 20-08-2019

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)

ಕರ್ನಾಟಕ ಸರ್ಕಾರ

**ಅರಣ್ಯ ಇಲಾಖೆ**

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಇವರ ಕಛೇರಿ,**
**ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು–560003**

# ಅರ್ಜಿ ನಮೂನೆ

**ಅಧಿಸೂಚನೆ ಸಂಖ್ಯೆ: ಬಿ9–ನೇಮಕಾತಿ–ವಿವ–5/2019–20 ದಿನಾಂಕ: 20–08–2019**

**ಅರಣ್ಯ ವ್ಯವಸ್ಥಾಪನಾಕಾರಿ (Forest Settlement Officer) ಹುದ್ದೆಗಳಿಗೆ**
**ಗುತ್ತಿಗೆ ಆಧಾರದ ಮೇಲೆ ನೇಮಕಾತಿ**

ಕನ್ನಡ ಅಥವಾ ಆಂಗ್ಲ ಭಾಷೆಯ ಸ್ಪಷ್ಟ ಅಕ್ಷರಗಳಲ್ಲಿ ಭರ್ತಿ ಮಾಡಿ
Fill Legibly in English (Capitals) or Kannada letters only

ಯಾವುದೇ ಅರ್ಜಿ ಶುಲ್ಕ ಇರುವುದಿಲ್ಲ. There is no Application Fee.

ಇತ್ತೀಚಿನ ಪಾಸ್ಪೋರ್ಟ್ ಅಳತೆಯ ಭಾವಚಿತ್ರ ಅಂಟಿಸಿ

Affix Recent Passport Size Photograph

1. ಅಭ್ಯರ್ಥಿಯ ಹೆಸರು
   Name of the Candidate

2. ಲಿಂಗ / Sex — ಪುರುಷ Male ☐ — ಮಹಿಳೆ Female ☐

3. ಜನ್ಮ ದಿನಾಂಕ/Date of Birth — ದಿನ / Day ☐☐ — ತಿಂಗಳು / Month ☐☐ — ವರ್ಷ / Year ☐☐☐☐

(ಅರ್ಜಿಯನ್ನು ಆಹ್ವಾನಿಸಿ ಜಾರಿ ಮಾಡಲಾಗಿರುವ ಈ ಅಧಿಸೂಚನೆಯ ದಿನಾಂಕಕ್ಕೆ ಅರ್ಜಿದಾರರು 65 ವರ್ಷ ವಯಸ್ಸನ್ನು ಮೀರಿರಬಾರದು.)

4. ಪತ್ರ ವ್ಯವಹಾರಕ್ಕಾಗಿ ಪೂರ್ಣ ವಿಳಾಸ ಹಾಗೂ ಮೊಬೈಲ್ ಸಂಖ್ಯೆ
   Address for Correspondence
   Mobile Number

   ಪಿನ್ ಕೋಡ್ / PIN CODE ☐☐☐☐☐☐

5. ಕರ್ತವ್ಯ ನಿರ್ವಹಿಸಲು ಆಯ್ಕೆ ಮಾಡುವ ಜಿಲ್ಲಾ ವ್ಯಾಪ್ತಿಯ ಕೇಂದ್ರಸ್ಥಾನ (ಅಧಿಸೂಚನೆಯ ಕ್ರ.ಸಂ. (3) ರಲ್ಲಿ ನಮೂದಿಸಿದೆ)

6. ಸೇವಾ ವಿವರದ ಕುರಿತು ಮಾಹಿತಿ (ಅರ್ಜಿದಾರರು ಸಹಾಯಕ ಆಯುಕ್ತರು (ಕಂದಾಯ) ಈ ಹುದ್ದೆಯಲ್ಲಿ ಸೇವೆ ಸಲ್ಲಿದ ಕುರಿತು ಸೇವಾ ವಿವರಗಳ ಮಾಹಿತಿ ಹಾಗೂ ವಯೋಮಿತಿಯ ಕುರಿತು ಅಧಿಕೃತ ದಾಖಲೆಗಳ ವಿವರ ನಮೂದಿಸುವುದು)

ಮೇಲಿನ ಮಾಹಿತಿಗಳು ಸತ್ಯವಾಗಿವೆ ಎಂದು ಪ್ರಮಾಣ ಮಾಡುತ್ತೇನೆ.

**Place / ಸ್ಥಳ**:
**Date / ದಿನಾಂಕ**:

**ಅರ್ಜಿದಾರರ ಸಹಿ**
**Signature of the Applicant**